# “ಕಾಗಿಣಿನಿಲಯ ಜಯತೀರ್ಥರು”

## “ಶ್ರೀಮಟ್ಟೀಕಾಕೃತ್ಪಾದರು”

**ಆರಾಧನೆ – ಆಷಾಢ ಕೃಷ್ಣ ಪಂಚಮಿ**


**ಸನ್ಯಾಸಾಶ್ರಮ ಕಾಲ – 1364-1387**

**ಆಶ್ರಮಗುರುಗಳು – ಶ್ರೀಅಕ್ಷೋಭ್ಯತೀರ್ಥರು**

**ಆಶ್ರಮ ಶಿಷ್ಯರು – ಶ್ರೀವಿದ್ಯಾಧಿರಾಜತೀರ್ಥರು**

**ವೃಂದಾವನ – ಮಲಖೇಡ**

**ಮೃತ್ತಿಕಾ ವೃಂದಾವನ – ಬೆಂಗಳೂರು**



ಶ್ರೀ ಜಯತೀರ್ಥರು ತಮ್ಮ ಗ್ರಂಥ ರಚನೆಗೆ/
ತಪಸ್ಸಿಗೆ ಕುಳಿತುಕೊಳ್ಳುತ್ತಿದ್ದ “ಯರಗೋಳ ಗುಹೆ”



ಈಗಲೂ ನಿತ್ಯ ಪೂಜಿತವಾಗಿರುವ
ಸರ್ಪಾಕಾರದಲ್ಲಿರುವ ಶ್ರೀ ಜಯತೀರ್ಥರು


# "ಕಾಗಿಣಿನಿಲಯ ಜಯತೀರ್ಥರು"

**ಚಿತ್ರೈಃ ಪದೈಶ್ಚ ಗಂಭೀರೈಃ ವಾಕ್ಯೈರ್ಮಾನೈರಖಂಡಿತೈಃ ।**
**ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ॥**

ವ್ಯಾಕರಣಾದಿ, ಪದಗಾಂಭೀರ್ಯದಿಂದಲೂ, ಯುಕ್ತವಾದ ಪದಗಳಿಂದಲೂ, ಆಳವಾದ ಅರ್ಥವುಳ್ಳ ವಾಕ್ಯಗಳಿಂದಲೂ ಪರವಾದಿಗಳಿಂದ ಖಂಡಿಸಲಶಕ್ಯವಾದ ಪ್ರತ್ಯಕ್ಷಾದಿ ಪ್ರಮಾಣಗಳಿಂದಲೂ ಕೂಡಿದ ಮತ್ತು ಸರ್ವಜ್ಞರಾದ ಪರಮ ಗುರುಗಳಾದ ಶ್ರೀ ಮದಾಚಾರ್ಯರ ಹೃದಯ ಭಾವವನ್ನು ಚೆನ್ನಾಗಿ ಪ್ರಕಟಮಾಡುವ ಶ್ರೀಜಯತೀರ್ಥರ ಮಾತು ಶೋಭಿಸುತ್ತದೆ.

**ಯಸ್ಯ ವಾಕ್ಕಾಮಧೇನುರ್ನಃ ಕಾಮಿತಾರ್ಥಾನ್ ಪ್ರಯಚ್ಛತಿ ।**
**ಸೇವೇ ತಂ ಜಯಯೋಗೀಂದ್ರಂ ಕಾಮಬಾಣಚ್ಛಿದಂ ಸದಾ ॥**

ಕಾಮಧೇನುವಿನಂತೆ ನಮಗೆ ಅಭೀಷ್ಟಗಳನ್ನು ಪೂರೈಸುವ ಸದ್ವಾಕ್ಯ-ಜಾಲಗಳುಳ್ಳ ಕಾಮಬಾಣಗಳನ್ನು ಗೆದ್ದ ಶ್ರೀಮಜ್ಜಯತೀರ್ಥ ಗುರುಗಳನ್ನು ಸೇವಿಸುತ್ತೇನೆ.




**<u>"ಜ" ಎಂದು ನುಡಿಯಲು ಜಯಶೀಲನಾಗುವ</u>**

**<u>"ಯ" ಎಂದು ನುಡಿಯಲು ಯಮನಂಜುವ</u>**

**<u>"ತೀ" ಎಂದು ನುಡಿಯಲು ತಿಮಿರಪಾತಕಹಾನಿ</u>**

**<u>"ರ್ಥ" ಎಂದು ನುಡಿದರೆ ತಾಪತ್ರಯ ಪರಿಹಾರ</u>**

# “ಕಾಗಿಣಿನಿಲಯ ಜಯತೀರ್ಥರು”

ಪೂರ್ವಾಶ್ರಮ ನಾಮ – ದೋಂಡೋ ನರಸಿಂಹಪಂತ

ತಂದೆ – ದೋಂಡೋ ರಘುನಾಥಪಂತ

ತಾಯಿ – ಸಖೂಬಾಯಿ

ವಂಶ – ಮಂಗಲವೇಡೆಯ ದೇಶಪಾಂಡೆ ಮನೆತನ

ಅಂಶ – ಇಂದ್ರಾಂಶ ಸಂಭೂತ

ಆವೇಶ – ಶೇಷ ದೇವರು

ಸಮಕಾಲೀನರು – ವಿದ್ಯಾರಣ್ಯರು, ಅಕ್ಷೋಭ್ಯತೀರ್ಥರು, ಪೇಜಾವರಮಠದ ವಿಜಯಧ್ವಜತೀರ್ಥರು, ಶೃಂಗೇರಿಪೀಠದ ವಾದೀಂದ್ರರು, ದಿಲ್ಲಿಯ ದೊರೆ ಫಿರೋಜಷಹ ತೊಗಲಖ್,ಇತ್ಯಾದಿ

<u>೧.ವಿದ್ಯಾಭ್ಯಾಸ</u> – ವೈದಿಕ ವಿದ್ಯೆಗಳ ಜೊತೆಗೇ ಕುದುರೆ ಸವಾರಿ, ಖಡ್ಗ ವಿದ್ಯೆ, ಮಲ್ಲ ವಿದ್ಯೆ, ಲೆಖ್ಖಪತ್ರಗಳನ್ನು ನೋಡಿಕೊಳ್ಳುವುದು, ಸಂಸ್ಥಾನದ ಆಡಳಿತಕ್ಕೆ ಬೇಕಾದ ವಿದ್ಯೆಗಳನ್ನೆಲ್ಲ ಕಲಿತರು. ಕುದುರೆ ಸವಾರಿಯಲ್ಲಿ ಬಹಳ ನಿಷ್ಣಾತನಾಗಿದ್ದನು.

<u>೨.ಅಕ್ಷೋಭ್ಯತೀರ್ಥರು</u> ಪೂರ್ವಾಶ್ರಮದಲ್ಲಿ ಗೋವಿಂದಭಟ್ಟರು, ಜಯತೀರ್ಥರ ಪೂರ್ವಾಶ್ರಮ ದೊಡ್ಡಪ್ಪನೇ ಆಗಿದ್ದರು. ದೋಂಡೋ ನರಸಿಂಹಪಂತನ ನಾಮಕರಣ, ವಿದ್ಯಾಭ್ಯಾಸ, ಉಪನಯನದ ಸಂಸ್ಕಾರವೆಲ್ಲ ಅಕ್ಷೋಭ್ಯತೀರ್ಥರ ನೇತೃತ್ವದಲ್ಲೇ ನಡೆಯಿತು.

# “ಕಾಗಿಣಿನಿಲಯ ಜಯತೀರ್ಥರು”

**<u>೩.ಹಿಂದಿನ ಅವತಾರ</u>** – ಶ್ರೀಮದ್ವಾಚಾರ್ಯರ ಕಾಲದಲ್ಲಿ ಶ್ರೀಮದಾಚಾರ್ಯರ ಗ್ರಂಥಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಎತ್ತಾಗಿ ಜನಿಸಿ, ಶ್ರೀಮದಾಚಾರ್ಯರ ಪಾಠಪ್ರವಚನ ವೇಳೆ ತಾನೂ ಆಲಿಸುತ್ತಿತ್ತು. ಆಗ ಒಮ್ಮೆ ಆಚಾರ್ಯರು ತಮ್ಮ ಶಿಷ್ಯರಿಗೆ ತಾವು ಮಾಡಿದ ಗ್ರಂಥಗಳನ್ನು ವ್ಯಾಖ್ಯಾನ/ಟೀಕಾವನ್ನು ಯಾರು ಬರೆಯುತ್ತಾರೆಂದು ಪ್ರಶ್ನಿಸಲು ಶ್ರೀಮದಾಚಾರ್ಯರು ಆ ಎತ್ತನ್ನು ತೋರಿಸಿದ್ದರಂತೆ. ಆ ಎತ್ತೇ ಮುಂದಿನ ಜನ್ಮದಲ್ಲಿ ಟೀಕಾರಾಯರಾಗಿ ಜನಿಸಿದರು.

**<u>೪.ಶಿಷ್ಯಾನ್ವೇಷಣೆಯಲ್ಲಿ ಅಕ್ಷೋಭ್ಯತೀರ್ಥರು</u>** –

ಶ್ರೀಮಾಧವತೀರ್ಥರಿಂದ ಸರ್ವಜ್ಞ ಪೀಠವನ್ನು ಅಲಂಕರಿಸಿದ್ದ ಶ್ರೀಅಕ್ಷೋಭ್ಯತೀರ್ಥರು, ತಮ್ಮ ಉತ್ತರಾಧಿಕಾರಿಯ ನಿರೀಕ್ಷೆಯಲ್ಲಿದ್ದಾಗ, ಶ್ರೀಮದಾಚಾರ್ಯರು, “ನಾಳೆ ನೀವು ಈ ಕ್ಷೇತ್ರದ ನದೀ ತೀರದಲ್ಲೇ ಜಪ ಮಾಡುತ್ತಿರಿ. ಆಗ ಒಬ್ಬ ತೇಜಸ್ವಿ ಯುವಕನೊಬ್ಬ ಕುದುರೆಯ ಮೇಲಿದ್ದುಕೊಂಡೆ ಪಶುವಿನಂತೆ ನದಿಯ ನೀರನ್ನು ಕುಡಿಯುತ್ತಾನೆ. ಅವನೇ ನಿಮ್ಮ ಶಿಷ್ಯನೆಂದು ತಿಳಿಯಿರಿ” ಎಂದು ಕನಸಿನಲ್ಲಿ ಹೇಳಿದರು.

**<u>5.“ಕಿಂ ಪಶು: ಪೂರ್ವದೇಹೇ”</u>** –

ಮಾರನೇ ದಿನ ಅಕ್ಷೋಭ್ಯತೀರ್ಥರು ಭೀಮರತಿ ನದಿಯಲ್ಲಿ ಸ್ನಾನ-ಜಪತಪಗಳನ್ನು ಮಾಡಿ, ಶ್ರೀಮೂಲರಾಮದೇವರನ್ನು ಪೂಜಿಸಿ,

ಸ್ವಾಮಿಗೆ ನೈವೇದ್ಯ ಮಾಡಿ, ತಾವೂ ಭುಂಜಿಸಿ, ವಿಷ್ಣುಪಾದದ ಗುಡಿಯ ಬಳಿ ಕುಳಿತು ಜಪಿಸುತ್ತಿದ್ದಾಗ, ಮಧ್ಯಾಹ್ನ ಉರಿಬಿಸಿಲು, ಬೇಸಿಗೆ. ಅದೇ ಸಮಯದಲ್ಲಿ, ಒಬ್ಬ ಸುಂದರನಾದ ರಾವುತನು ಅಕ್ಷೋಭ್ಯತೀರ್ಥರ ಮುಂದೆಯೇ ಹಾದುಹೋದರೂ, ಶ್ರೀಗಳನ್ನು ಕಣ್ಣೆತ್ತಿಯೂ ನೋಡಲಿಲ್ಲ, ಕುದುರೆಮೇಲೆ ಕುಳಿತೇ, ನದಿಯ ನೀರಿಗೆ ಪಶುವಿನಂತೆ ನೇರ ಬಾಯಿ ಹಾಕಿ ಕುಡಿದನು. ಆಗ ಅದನ್ನು ಗಮನಿಸಿದ್ದ ಅಕ್ಷೋಭ್ಯತೀರ್ಥರು ನದಿಯ ಸಮೀಪ ಬಂದು ಗಟ್ಟಿಯಾಗಿ ಹೇಳಿದರು – "ಕಿಂ ಪಶು: ಪೂರ್ವದೇಹೇ?" – ಅಯ್ಯಾ, ಪಶುವಿನಂತೆ ನೀನು ನೀರಿಗೆ ಬಾಯಿ ಹಾಕಿ ಕುಡಿಯುತ್ತಿರುವೆಯಲ್ಲಾ, ನೀನೇನಾದರೂ ಹಿಂದಿನ ಜನ್ಮದಲ್ಲಿ ಪಶುವಾಗಿದ್ದೆಯಾ? ಎಂದರು. ಅಲ್ಲಿಯವರೆಗೂ ಸುಮ್ಮನಿದ್ದ ಆ ರಾವುತನಿಗೆ **"ಕಿಂ ಪಶು: ಪೂರ್ವದೇಹೇ?"**ಎಂಬ ಮಾತು ವಿದ್ಯುತ್ ಸಂಚಾರವಾದಂತಾಯಿತು. ಅವನಿಗೆ ಪೂರ್ವಜನ್ಮಗಳ ಸ್ಮರಣೆಯೂ ಬಂದಿತು. ತಾನು ಅದಿತಿ ಕಶ್ಯಪರ ಪುತ್ರನಾಗಿ ಜನಿಸಿದ್ದು, ಮಹಾವಿಷ್ಣುವಿನ ಅನುಗ್ರಹದಿಂದ ಇಂದ್ರಪದವಿಗೇರಿದ್ದು, ಹದಿನಾಲ್ಕು ಇಂದ್ರರಲ್ಲಿ ಏಳನೇಯ ಇಂದ್ರನಾಗಿ ಅವತರಿಸಿದುದು, ಬ್ರಹ್ಮಹತ್ಯೆಗೆ ಗುರಿಯಾಗಿದ್ದು, ದಧೀಚಿ ಋಷಿಯ ಅಸ್ಥಿಯಿಂದ ವಜ್ರಾಯುಧವನ್ನು ಪಡೆದದ್ದು, ವೃತ್ರಾಸುರನನ್ನು ಕೊಂದದ್ದು, ಅಹಲ್ಯೆಯ ಪಾತಿವ್ರತ್ಯವನ್ನು ಭಂಗಗೊಳಿಸಿದ್ದು, ತನ್ನ ವಾಲಿ ಅವತಾರ, ಕುಂತಿದೇವಿಗೆ ಮಗನಾಗಿ ಅರ್ಜುನನಾಗಿ ಅವತರಿಸಿದ್ದು, ಆಚಾರ್ಯರಿಂದ ಪಾಠ ಪ್ರವಚನ ವೇಳೆ ಸಚ್ಛಾಸ್ತ್ರ ಶ್ರವಣ ಮಾಡಿದ್ದು,

ಹೀಗೆ ಹಿಂದಿನ ಹಲವಾರು ಜನ್ಮದಲ್ಲಿ ತಾನು ಮಾಡಿದ ಸಾಧನೆಗಳನ್ನೆಲ್ಲಾ ಪರಾಮರ್ಶೆ ಮಾಡಿದರು – ದೋಂಡೋ ನರಸಿಂಹಪಂತರು. ಕೂಡಲೇ ತಾನು ಸನ್ಯಾಸವನ್ನು ಸ್ವೀಕರಿಸಬೇಕೆಂದು ತೀರ್ಮಾನಿಸಿದರು. ದೋಂಡೋಪಂತನು ಅಕ್ಷೋಭ್ಯತೀರ್ಥರ ಬಳಿಗೆ ಬಂದು ತನ್ನ ಪೋಷಾಕನ್ನು ಬಿಚ್ಚಿ ನಮಸ್ಕರಿಸಿದಾಗ, ಅವರಿಗೆ ತಮ್ಮ ಪೂರ್ವಾಶ್ರಮದ ತಮ್ಮನ ಮಗನೇ ಇವನೆಂದು ತಿಳಿಯಿತು. ಗುರುಗಳನ್ನು ತನಗೆ ಆಶ್ರಮ ನೀಡಬೇಕೆಂದು ಕೇಳಿದಾಗ, ಅಕ್ಷೋಭ್ಯತೀರ್ಥರು ಒಪ್ಪಲಿಲ್ಲ, ನಿನಗಿನ್ನೂ ೨೨ ವರ್ಷ, ಬೇಡವೆಂದರು. ಆದರೆ ದೋಂಡೋಪಂತರು ಒಪ್ಪಲಿಲ್ಲ, ಸನ್ಯಾಸಾಶ್ರಮಕ್ಕಾಗಿ ಪಟ್ಟು ಹಿಡಿದು, ಸ್ವೀಕರಿಸಿದರು.

<u>೬.ರಾಜ್ಯಲಕ್ಷ್ಮಿ,ಭೋಗಲಕ್ಷ್ಮಿಯನ್ನೂ ತಿರಸ್ಕರಿಸಿದ ದೋಂಡೋಪಂತ:</u> – ಅಷ್ಟರಲ್ಲಿ ವಿಷಯ ತಿಳಿದ ಅವರ ತಂದೆತಾಯಿಗಳು ಅಲ್ಲಿಗೇ ಬಂದು ಸನ್ಯಾಸಾಶ್ರಮ ಸ್ವೀಕರಿಸಿದ್ದರೂ, ಅವರನ್ನು ಕರೆದುಕೊಂಡು ಮನೆಗೆ ಹೋದರು. ತಮ್ಮ ಸೊಸೆ ಭೀಮಾಭಾಯಿ ಋತುಸ್ನಾನ ಮಾಡಿದ್ದಳು. ಅವಳಿಗೆ ಅಭ್ಯಂಜನ ಸ್ನಾನ ಮಾಡಿಸಿ, ಅಲಂಕರಿಸಿ, ದೋಂಡೋಪಂತನಿಗೂ ಅಲಂಕರಿಸಿ, ಶಯನಗೃಹಕ್ಕೆ ಕಳುಹಿಸಿದರು. ದೋಂಡೋಪಂತನಿಗಾದರೋ ನವ ಯೌವನ, ರಾಜ್ಯಲಕ್ಷ್ಮಿಯೊಂದು ಕಡೆ, ಭೋಗಲಕ್ಷ್ಮಿಯೊಂದು ಕಡೆ. ಆದರೆ ಇವನಿಗೆ ಇಬ್ಬರ ಮೇಲೂ ಆಸಕ್ತಿ ಇರಲಿಲ್ಲ. ಭೀಮಾಬಾಯಿಗೆ ಜಯತೀರ್ಥರು ಶಯನಗೃಹದಲ್ಲಿ ಸರ್ಪದಂತೆ ಕಂಡುಬಂದರು. ಅವಳು ಮೂರು

ಬಾರಿ ಶಯನಗೃಹ ಪ್ರವೇಶಿಸಿದಾಗಲೂ, ಅವಳಿಗೆ ಸರ್ಪ ಕಾಣಿಸಿತೇ ಹೊರತು, ದೋಂಡೋಪಂತನೇ ಕಾಣಲಿಲ್ಲ. ಆದರೆ ಯೋಗನಿದ್ರೆಯಲ್ಲಿದ್ದ ಸನ್ಯಾಸಿ ದೋಂಡೋಪಂತನಿಗೆ ಇದಾವುದರ ಅರಿವೆಯೇ ಇಲ್ಲ. ಇದನ್ನೆಲ್ಲ ನೋಡಿದ ಅವನ ತಂದೆತಾಯಿಗಳು ಮತ್ತೆ ಅವನನ್ನು ಅಕ್ಷೋಭ್ಯತೀರ್ಥರಲ್ಲಿಯೇ ಕರೆದುಕೊಂಡು ಹೋದರು.

## ೭. <u>ವಿದ್ಯಾರಣ್ಯರಿಂದ ಶರಣಾಗತಿ, ಸನ್ಮಾನ</u> –

ಒಮ್ಮೆ ಅದ್ವೈತ ತತ್ತ್ವದಲ್ಲಿ ಅತ್ಯಂತ ಪ್ರಸಿದ್ಧರಾದ, ಶಂಕರಾಚಾರ್ಯರ ನಂತರ ಅತ್ಯಂತ ಹೆಸರುವಾಸಿಯಾಗಿದ್ದ ವಿದ್ಯಾರಣ್ಯರು, ಮಾರ್ಗಮಧ್ಯೆ ಮಳಖೇಡ ಕ್ಷೇತ್ರಕ್ಕೆ ಬಂದಿದ್ದರು. ಅಲ್ಲಿ ಸಮೀಪದ ಯರಗೋಳ ಕ್ಷೇತ್ರದಲ್ಲಿ ಅಕ್ಷೋಭ್ಯತೀರ್ಥರ ಶಿಷ್ಯರಾದ ಜಯತೀರ್ಥರು ಗ್ರಂಥರಚನೆಯಲ್ಲಿ ತೊಡಗಿದ್ದಾರೆಂದು ತಿಳಿಯಿತು. ಕೂಡಲೇ ಅವರಿಗೆ ನೆನಪಾಯಿತು. ಇವರ ಗುರುಗಳಿಂದ ಸೋತಿದ್ದ ವಿದ್ಯಾರಣ್ಯರು, ಅಂಥವರ ಶಿಷ್ಯರು ಜಯತೀರ್ಥರು ಹೇಗಿದ್ದಾರೆ, ನೋಡೋಣವೆಂದು ಯರಗೋಳ ಗುಹೆಗೇ ಬಂದರು. ಉಭಯ ಕುಶಲೋಪರಿಯಾದ ಮೇಲೆ ವಿದ್ಯಾರಣ್ಯರು ಜಯತೀರ್ಥರನ್ನು "ಕೋ ಭಗವಾನ್?" ಎಂದರು,

ಜಯತೀರ್ಥರು – "ಸಪ್ಪೋಹಂ" ಎಂದರು.

ವಿದ್ಯಾರಣ್ಯರು – "ರೇಫ: ಕ್ವ ಗತ:" ಎಂದರು.

ಜಯತೀರ್ಥರು – "ತ್ವಯ್ಯೈವಾಪಹೃತಂ ಪುರಾ"
ಇಲ್ಲಿ ವಿದ್ಯಾರಣ್ಯರು ಕೋ ಭಗವಾನ್ ಎನ್ನಬೇಕಿತ್ತು, ಆದರೆ ಅವರು ರೇಫವನ್ನು ಸೇರಿಸಿದ್ದರು. ಉತ್ತರಿಸುತ್ತಾ, ಜಯತೀರ್ಥರು ರೇಫವನ್ನು ಬೇಕೆಂದೇ ಬಿಟ್ಟು "ಸರ್ಪೋಽಹಂ" ಎನ್ನುವ ಬದಲು "ಸಪ್ಪೋಽಹಂ" ಎಂದರು. ಹೀಗೆ ಅವರ ಜಾಣ್ಮೆಯುತ್ತರ ನೋಡಿ ವಿದ್ಯಾರಣ್ಯರು ಮೆಚ್ಚಿದರು. ಆಗ ಜಯತೀರ್ಥರು ತಾವು ರಚಿಸುತ್ತಿದ್ದ ಶ್ರೀಮದಾಚಾರ್ಯರ "ಪ್ರಮಾಣಲಕ್ಷಣ"ವನ್ನು ವಿದ್ಯಾರಣ್ಯರಿಗೆ ನೋಡಲು ಕೊಟ್ಟರು. ಆದರೆ ಅವರಿಗೆ ಪ್ರಮಾಣಲಕ್ಷಣದ ತಲೆಬುಡವೇ ಅರ್ಥವಾಗಲಿಲ್ಲ. ಪ್ರಮಾಣಲಕ್ಷಣದಲ್ಲಿ ಜ್ಞಾನಿಗಳ ಪ್ರತ್ಯಕ್ಷವು ಪ್ರಬಲ ಪ್ರಮಾಣವು. ಈಶ್ವರ, ಲಕ್ಷ್ಮೀ, ಋಜುಯೋಗಿಗಳೇ ಮುಂತಾದ ಹಲವರ ಜ್ಞಾನ-ಸ್ವರೂಪ ಲಕ್ಷಣಗಳನ್ನು ಆಚಾರ್ಯರು ಬಹಳ ಕ್ಲಿಷ್ಟಶೈಲಿಯಲ್ಲಿ ಹೇಳಿದ್ದರು, ಪ್ರತ್ಯಕ್ಷಕ್ಕೆ ಸಾಧನವಾದ ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಎಂಬಂತಹ ಲಕ್ಷಣಗಳನ್ನೂ ವಿವರಿಸಿದ್ದರು. ಈ ಗ್ರಂಥವನ್ನು ತೆಗೆದುಕೊಂಡು ಯಾವ ವಾಕ್ಯವನ್ನು ಓದಿದರೂ, ವಿದ್ಯಾರಣ್ಯರಿಗೆ ಸ್ಪಷ್ಟ ಅರ್ಥ ಹೊಳೆಯಲಿಲ್ಲ. ಕಡೆಗೆ "ಬಾಲ ವಾಕ್ಯೇನ ಕಿಂ ಮೇ" ಎಂದರು. ಆಗ ಜಯತೀರ್ಥರು "ಈ ಗ್ರಂಥವು ಬಾಲವಾಕ್ಯವೋ ಅಥವಾ ನಿಮ್ಮ ಬುದ್ಧಿಯೇ ಬಾಲಬುದ್ದಿಯೋ ಸರಿಯಾಗಿ ತಿಳಿದುಕೊಳ್ಳಿ" ಎಂದು ತಾವು ರಚಿಸಿದ್ದ ಪ್ರಮಾಣಲಕ್ಷನ ಟೀಕೆಯನ್ನು ಅವರ ಕೈಗಿತ್ತರು. ಆಗ ಅವರಿಗೆ ಸಂಪೂರ್ಣ ಅರ್ಥವಾಯಿತು,

# "ಕಾಗಿಣಿನಿಲಯ ಜಯತೀರ್ಥರು"

ವಿದ್ಯಾರಣ್ಯರಿಗೆ ಶ್ರೀಮದಾಚಾರ್ಯರ ಬುದ್ಧಿಶಕ್ತಿಯೂ, ಜಯತೀರ್ಥರ ಅಗಾದ ಪಾಂಡಿತ್ಯ, ಶೈಲಿಯನ್ನೂ ನೋಡಿ ಬಹಳ ಸಂತೋಷವಾಯಿತು, ಜಯತೀರ್ಥರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಅವರ ಗ್ರಂಥವನ್ನು ಶಿರಸಾಧಾರಣೆ ಮಾಡಿದರು. ವಿದ್ಯಾರಣ್ಯರು ತನ್ನ ಶಿಷ್ಯರಾದ ಇಮ್ಮಡಿ ಹರಿಹರನಿಗೆ ಹೇಳಿ, ಜಯತೀರ್ಥರ ಗ್ರಂಥವನ್ನು, ಶ್ರೀಮದಾಚಾರ್ಯರ ಸರ್ವಮೂಲಗ್ರಂಥವನ್ನೂ ಭವ್ಯವಾದ ಅಂಬಾರಿಯಲ್ಲಿ ಇರಿಸಿ ಮೆರವಣಿಗೆ ಮಾಡಿಸಿ, ರಾಜ ಸನ್ಮಾನ ಏರ್ಪಡಿಸಿ ಕೃತಾರ್ಥರಾದರು.

೮. ಪೇಜಾವರ ಮಠದ ವಿಜಯಧ್ವಜತೀರ್ಥರು ತಾವು ಬರೆದಿದ್ದ ಶ್ರೀಮದ್ಭಾಗವತಕ್ಕೆ ವ್ಯಾಖ್ಯಾನರೂಪವಾದ "ಪದರತ್ನಾವಲಿವ್ಯಾಖ್ಯಾನ" ವನ್ನು ಶ್ರೀ ಜಯತೀರ್ಥರಿಗೆ ಸಮರ್ಪಿಸಿದರು. ಅದು ಈಗಲೂ ವಿಜಯಧ್ವಜೀಯ ವ್ಯಾಖ್ಯಾನವೆಂದು ಪ್ರಸಿದ್ಧವಾಗಿದೆ.

೯. ಒಮ್ಮೆ ಜಯತೀರ್ಥರು ಕೊಲ್ಹಾಪುರಕ್ಕೆ ಆಗಮಿಸಲು ಅಲ್ಲಿನ ಅದ್ವೈತ ಪರಂಪರೆಯ ಪೀಠಾಧಿಪತಿಗಳಾಗಿದ್ದ ವಾದೀಂದ್ರ ಎಂಬುವರು ಇವರನ್ನು ವಾಕ್ಯಾರ್ಥಕ್ಕೆ ಆಹ್ವಾನಿಸಲು, ಒಂದು ವಾರ ಕಾಲ "ತತ್ತ್ವಮಸಿ", "ಜೀವ-ಬ್ರಹ್ಮ" ಎಂಬ ಉಪನಿಷದ್ವಾಕ್ಯದ ಬಗ್ಗೆ ವಾಗ್ವಾದ ನಡೆದು ಜಯತೀರ್ಥರೇ ವಿಜಯಿಯಾದರು.

೧೦. ದಿಲ್ಲಿಯ ರಾಜನಾಗಿದ್ದ ಸುಲ್ತಾನ್ ಫಿರೋಜಷಹ ತೊಗಲಖ ಇವರನ್ನು ದಿಲ್ಲಿಗೆ ಆಹ್ವಾನವಿತ್ತು, ಸನ್ಮಾನಿಸಿದನು.

# “ಕಾಗಿಣಿನಿಲಯ ಜಯತೀರ್ಥರು”

**ರಾ ಗ – ಶ ಂ ಕ ರಾ ಭ ರ ಣ : ತಾ ಳ – ಅ ಟ ತಾ ಳ**

ಸಾರಿ ಭಜಿಸಿರೊ ಟೀಕಾರಾಯರಂಘ್ರಿಯ ।
ಘೋರಪಾತಕಾಂಬುಧಿಯ ಪಾರಮಾಳ್ಪರ । ಪ ।
ಮೋದತೀರ್ಥರ ಮತವ ಸಾಧಿಸುವರ ।
ಪಾದಸೇವ್ಯರ ದುರ್ಬೋಧ ಕಳೆವರ । ೧ ।
ಭಾಷ್ಯತತ್ವವ ವಿಸ್ತಾರ ಮಾಳ್ಪರ ।
ದೋಷದೂರರ ಆದಿಶೇಷಾವೇಶರ । ೨ ।
ಕಾಮಗೆದ್ದರ ಹರಿಗೆ ಪ್ರೇಮಪೂರ್ಣರ ।
ನೇಮನಿತ್ಯರ ನಿಷ್ಕಾಮನಾಪರ । ೩ ।
ಮೋಕ್ಷದಾತರ ಅಕ್ಷೋಭ್ಯತೀರ್ಥರ ।
ಸಾಕ್ಷಿಲಿಪ್ಪರ ಅಪೇಕ್ಷರಹಿತರ । ೪ ।
ವಿಜಯವಿಟ್ಠಲನ ಅಂಘ್ರಿ ಭಜನೆ ।
ಮಾಳ್ಪರ ಕುಜನಭಂಜರ ದಿಗ್ವಿಜಯರಾಯರ । ೫ ।

---

**ರಾ ಗ – ಆ ನ ಂ ದ ಭೈ ರ ವಿ : ತಾ ಳ – ಮಿ ಶ್ರ ಛಾ ಪು ತಾ ಳ**

ಟೀಕಾಚಾರ್ಯರ ಪಾದ ಸೋಕಿದ
ಕೊನೆಧೂಳಿ । ತಾಕಿದ ಮನುಜರಿಗೆ । ಪ ।
ಕಾಕುಗೊಳಿಸುವ ಅನೇಕ ಪಾಪಂಗಳ ।
ನೂಕಿ ಬಿಸಾಡಲು ಸಾಕಾರ ಉಳ್ಳಂಥ ।ಅಪ ।
ಮಧ್ವಮತವೆಂಬೊ ದುಗ್ದಾಬ್ಧಿಯೊಳು
ಉದ್ಭವಿಸಿದ ಚಂದ್ರನೊ ಅದ್ವೈತಮತವನಭೇದನ ಕುಠಾರ
ವಿದ್ಯಾರಣ್ಯನ ಗರ್ವಕ್ಕೆ ಪರಿಹಾರ । ೧ ।

# “ಕಾಗಿಣಿನಿಲಯ ಜಯತೀರ್ಥರು”

ತತ್ವವಾರಿಧಿಸಾರ  ತತ್ವಸುಧಾಭಾಷ್ಯ
ವಿಸ್ತಾರವಾಗಿರಲು ಚಿತ್ತವಿಟ್ಟು  ಮಾಡಿ
ಟೀಕಾವನ್ನು ಸುತ್ತೇಳು
ಜಗಕೆಲ್ಲ  ಪ್ರಕಟಿಸಿ  ಮೆರೆದಂಥ      । ೨ ।
ಎಂದಿಗಾದರು ಒಮ್ಮೆ ಕೊನೆ ನಾಲಿಗೆಯಿಂದ
ಬಿಂದು ಮಾತ್ರದಿ ನೆನೆಯೆ
ಮಂದಮತಿಗಾದರು ಅಜ್ಞಾನ ನಾಶನ
ಸಂದೇಹವಿಲ್ಲವಯ್ಯ ಸ್ಮರಣೆ ಮಾಡಿದ ಮೇಲೆ ।೩।
ಜ ಎಂದು  ನುಡಿಯಲು  ಜಯಶೀಲನಾಗುವ
ಯ ಎಂದು ನುಡಿಯಲು  ಯಮನಂಜುವ
ತೀ ಎಂದು  ನುಡಿಯಲು  ತಿಮಿರ  ಪಾತಕ  ಹಾನಿ
ರ್ಥ ಎಂದು  ನುಡಿದರೆ  ತಾಪತ್ರಯ  ಪರಿಹಾರ    । ೪ ।
ಯೋಗಿ ಅಕ್ಷೋಭ್ಯರ ಕರಕಮಲ
ಸಂಜಾತ ಭಾಗವತರ ಪ್ರಿಯನೆ
ಕಾಗಿಣಿ ತೀರದ ಮಳಖೇಡ ನಿವಾಸ
ಶ್ರೀಗುರು **ವಿಜಯವಿಟ್ಠಲನ** ಸೇವಕದಾಸ          । ೫ ।

---

**ರಾ ಗ – ಆ ನ ಂ ದ ಭೈ ರ ವಿ  :  ತಾ ಳ  : ಆ ದಿ ತಾ ಳ**

ಎದುರಾರೈ  ಗುರುವೆ  ಸಮರಾರೈ            । ಪ ।
ಮದನ  ಗೋಪಾಲನ  ಪ್ರಿಯ  ಜಯರಾಯ       । ಅ ಪ ।
ಕಡುಗರ್ಜಿಸುವ  ಕೇಸರಿಯಂತೆ  ನಿಮ್ಮ  ವಾದ

# “ಕಾಗಿಣಿನಿಲಯ ಜಯತೀರ್ಥರು”

ಗಡಣೆಯ ಕೇಳುತ ನುಡಿ ಮುಂದೋಡದೆ
ಗಡಗಡ ನಡುಗುತ ಮಾಯ್ಗೋಮಾಯ್ಗಳು
ಅಡವಿಯೊಳಡಗೋರು ನಿಮ್ಮ ಭೀತಿಯಲಿ ।೧।
ಕುಟಿಲ ಮತಗಳೆಂಬೊ ಚಟುಲಂಧಕಾರಕ್ಕೆ
ಪಟುತರ ತತ್ವಪ್ರಕಾಶಿಕೆಯೆಂತೆಂಬ
ಚಟುಲತಾಪದಿಂದ ಖಂಡಿಸಿ ತೇಜೋತ್ಕಟದಿ
ಮೆರೆದ ಬುಧಕಟಕಾಬ್ಜ ಮಿತ್ರ ।೨।
ಅಮಿತ ದ್ವಿಜಾವಳಿ ಕುಮುದಗರಳಿಸಿ
ವಿಮತರ ಮುಖಕಮಲಂಗಳ ಬಾಡಿಸಿ
ಸ್ವಮತರ ಹೃತ್ಸಂತಾಪಗಳೋಡಿಸಿವಿಮಲ
ಸುಕೀರ್ತಿಯ ಪಡೆದೆಯೋ ಚಂದ್ರ ।೩।
ವೇದಶಾಸ್ತ್ರಗಳೆಂಬೊ ಶೃಂಗಗಳಿಂದ ಸುಧಾದಿ
ಗ್ರಂಥಗಳೆಂಬೊ ಸ್ತನದಿಂದೊಪ್ಪುತ ತತ್ವ-
ಬೋಧನೆಯೆಂಬ ದುಗ್ಧ ಶಿಷ್ಯವತ್ಸಂಗಳಿಗೆ
ಆದರದಲಿ ಕೊಟ್ಟ ಯತಿಸುರಧೇನು ।೪।
ವ್ಯಾಸಸೂತ್ರಗಳೆಂಬ ಮಂದರವನು
ವೇದ ರಾಶಿಯೆಂಬ ವಾರಾಶಿಯೊಳಿಟ್ಟು
ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ
ಭಾಸುರ ನ್ಯಾಯಸುಧಾ ಪಡೆದ ಯತೀಂದ್ರ ।೫।
ವನಜನಾಭನ ಗುಣಮಣಿಗಳು ಸರ್ವಜ್ಞ
ಮುನಿಕೃತ ಗ್ರಂಥಗಳವನಿಯೊಳಗಡೆ
ಸಜ್ಜನರಿಗೆ ಟೀಕಾಂಜನದಿಂದ ತೋರಿಸಿ ಘನ

# "ಕಾಗಿಣಿನಿಲಯ ಜಯತೀರ್ಥರು"

ಸುಖಸಾಧನ ಮಾಡಿದ್ಯೋ ಧೀರ ।೬।
ಅರ್ಥಿಮಂದಾರ ವೇದಾರ್ಥವಿಚಾರ
ಸಮರ್ಥ **ಶ್ರೀಕೃಷ್ಣ** ಪಾದಾಂಬುಜಲೋಲ
ಪ್ರತ್ಯರ್ಥಿ ಮತ್ತೇಭಕಂಠೀರವಕ್ಷೋಭ್ಯತೀರ್ಥ
ಕರಜ ಜಯತೀರ್ಥ ಯತೀಂದ್ರ |7|

---

ಜಯರಾಯ ಜಯರಾಯ ॥ ಪ ॥
ಜಯರಾಯ ನಿನ್ನ ದಯವುಳ್ಳ ಜನರಿಗೆ
ಜಯವಿತ್ತು ಜಗದೊಳು ಭಯಪರಿಹರಿಸುವ ॥ಅ.ಪ ॥
ಖುಲ್ಲರಾದ ಮಾಯ್ಗಳ ಹಲ್ಲು ಮುರಿದು
ವಲ್ಲಭ ಜಗಕೆ ಶ್ರೀನಲ್ಲನೆಂದರುಹಿದಿ ॥ ೧ ॥
ಮಧ್ವರಾಯರ ಮತ ಶುದ್ಧಶರಧಿಯೊಳು
ಉದ್ಭವಿಸಿದ ಗುರು ಸಿದ್ಧಾಂತಸ್ಥಾಪಕ ॥ ೨ ॥
**ಸಿರಿಹಯವದನನ** ಚರಣಕಮಲವನು
ಭರದಿ ಭಜಸುವರ ದುರಿತಗಳ ಹರಿಸುವ ॥ ೩ ॥ **ವಾದಿರಾಜರು**

=====================================

ವರ್ಣಿಸಲಳವೆ ಸುಗುಣಸಾಂದ್ರನ ॥ ಪ ॥
ಕರ್ಣಜನಕಕೋಟಿ ತೇಜ
ಶ್ರೀಶ ಭಜಕ ಜಯ ಮುನೀಂದ್ರನ ॥ ಅ.ಪ ॥
ಮಧ್ವಶಾಸ್ತ್ರ ದುಗ್ಧ ನಿಧಿಯೊಳ್

# “ಕಾಗಿಣಿನಿಲಯ ಜಯತೀರ್ಥರು”

ಬುದ್ಧಿಯೆಂಬ ಮಂದರಗಿರಿಯ
ಶುದ್ಧ ಸೂತ್ರ ನೇತ್ರದಿಂದ ಬದ್ಧಮಾಡಿ ಪಿಡಿದು ಕಡೆದು
ಶುದ್ಧ ಯುಕುತಿ ಸುಧೆಯ ತೆಗೆದನ ಶಿಷ್ಯ ಜನಕೆ
ಶ್ರದ್ಧೆಯಿಂದಲದನು ಎರೆದನ ಕ್ರೋಧದಿಂದ
ಕೃದ್ಧವಾದಿಗಳನು ಗೆಲಿದನ – ಜಯ ಮುನೀಂದ್ರನ ॥ ೧ ॥
ಮಾನನೀಯ ಶೀಲರಾದ ಮಾನವರನು ಕರೆದು ಹರಿಯ
ಧ್ಯಾನದಲ್ಲಿ ನಿಲಿಸಿ ಒಲಿಸಿ ಹಾನಿಯಿಲ್ಲದ ಮುಕುತಿ ಪಡೆದ
ಜ್ಞಾನಮತವ ಜನಕೆ ಸಾರ್ದನ, ಶಿಷ್ಯ ಜನಕೆ
ಸಾನುರಾಗದಿ ತತ್ವಪೇಳ್ದನೆ ಜಯ ಮುನೀಂದ್ರನ ॥ ೨ ॥
ಸರಸದಿಂದ ಮೂರ್ಖರೊಳು ವಿರಸ ದುಷ್ಟ ಭಾಷ್ಯಗಳನು
ಮುರಿದಕ್ಷೋಭ್ಯ ತೀರ್ಥಯತಿಪ ಕರಸಂಜಾತ ರಮ್ಯ ಚರಿತ
ಶರಣ ಜನರ ಪೊರೆವ ಯತಿಪನ, ಶಿಷ್ಯಜನರ
ಮರುಳ ಮೋಹತಿಮಿರ ದಿನಪನ, ನಮ್ಮ ಪರಮ
ಗುರು **ಶ್ರೀಕೃಷ್ಣ** ಪಾದಭಜಕನ ಜಯಮುನೀಂದ್ರನ ॥ ೩ ॥

**ವ್ಯಾಸರಾಜರು**

======================================

ಪಾಲಿಸು ಗುರುವರ್ಯ ಜಯಾರ್ಯ ॥ ಪ ॥
ಶ್ರೀಮದಾನಂದತೀರ್ಥರ ಕಂದ
ಶ್ರೀಮದಕ್ಷೋಭ್ಯರ ಕಂದ ಯತೀಂದ್ರ ॥ ೧ ॥
ಪೂರ್ಣಬೋಧ ತೀರ್ಥಾರ್ಣವಿಹಾರಿ
ಸ್ವರ್ಣಪಾತ್ರ ಸುಧಾಕಾರಿ ಉದಾರಿ ॥ ೨ ॥

# "ಕಾಗಿಣಿನಿಲಯ ಜಯತೀರ್ಥರು"

ಶ್ರೀ ನರಹರಿ ಧ್ಯಾನವಿಚಾರಿ
ಮೌನಿ ಗುಣಗಣಧಾರಿ ಉದ್ಧಾರಿ ॥ ೩ ॥ ***ಶ್ರೀಪ್ರದ್ಯುಮ್ನತೀರ್ಥರು***

-------------------------------------

ಜಯ ಜಯ ಜಯ ಮಧ್ವಶಾಸ್ತ್ರ ವ್ಯಾಖ್ಯಾನಾತಿಗೇಯ ॥ ಪ ॥
ಮಂಗಳವೇಢೆಯೊಳುದುಭವಿಸುತ ಜಗ-
ನ್ಮಂಗಲಕರವಾದ ಟೀಕೆಯ ರಚಿಸಿ
ಮಂಗಲ ಮೂರುತಿ ರಾಮನ ಭಜಿಸುತಾ-
ನಂಗನ ಜಯಿಸಿದ ಮುನಿಕುಲ ತಿಲಕ ॥ ೧ ॥

ವಿದ್ಯಾರಣ್ಯನೆಂಬ ಖಾಂಡವವನವನೆ
ಯಾದವೇಶನ ಸಖನಂತೆ ನೀ ದಹಿಸಿ
ಮಧ್ವಶಾಸ್ತ್ರವೆಂಬ ರತ್ನವ ಜನರಿಗೆ
ಸುಧೆಯಂತೆ ಕುಡಿಸಿದ ಯತಿವಂಶರತ್ನ ॥ ೨ ॥

ಮಾಧ್ವ ಗ್ರಂಥವ ನೀನು ಬಂಧುವೆಂದೆಣಿಸುತ
ರಾಜೇಶ ಹಯಮುಖ ಶ್ರೀರಾಮಚಂದ್ರ
ಪಾದಾಂಬುಹವನ್ನೆ ಬಿಡದೆ ಸೇವಿಸುತಲಿ
ವಾಧೀಭಗಳಿಗೆ ಮೃಗೇಂದ್ರ ನಾಗಿರುವಿ ॥ ೩ ॥

**ರಾಜೇಶ ಹಯವದನ ಅಂಕಿತ(ಶ್ರೀವಿಶ್ವೇಂದ್ರ ತೀರ್ಥರು)**

# “ಕಾಗಿಣಿನಿಲಯ ಜಯತೀರ್ಥರು”

ರಾಗ – ತೋಡಿ – ತ್ರಿಪುಟತಾಳ

ಭಳಿರೆ ಭಳಿರೆ ನಿನ್ನ ಗುಣಗಳ ತುತಿಸುವೆ ।
ಜಲದಿ ಸಮಗಾಂಭೀರ್ಯ ಜಯತೀರ್ಥವರ್ಯ ॥ ಪ ॥
ಆವಾವ ಪರಿಯಲ್ಲಿ ಹಯಗ್ರೀವ ಮೂರ್ತಿಯ ಪದವ
ತವಕದಿ ಚಿಂತಿಪ ವರಚಿಂತಾಮಣಿಯೇ ॥
ಪಾವನ ಗುರು ಶ್ರೀಮದಾನಂದತೀರ್ಥರ ।
ಭಾವನೆಗಳನೆ ಪೇಳಿಕಾವಸುಜನರನ್ನು ॥ ೧ ॥
ಮಧ್ವರಾಯರು ಬಂದು ನಿನ್ನೊಳಗೆ ನಿಂದಿರಲು ।
ಭೋದಮಯ ಸಿದ್ಧಾಂತ ಮತವನುದ್ಧರಿಸಿದ್ಯೋ ॥
ಅದ್ವೈ ತ ಮಾಯ್ಗಳ ಭೇದಿಸಿಜರೆವಂಥ ।
ಉದ್ಯೋಗದಲ್ಲಿದು ಉದ್ದಾರಮಾಡಿದ್ಯೋ ॥ ೨ ॥
ನಿನ್ನ ಕೃತಿಯೊಳಂಜನ ದೃಷ್ಟಿಯಿಟ್ಟು ।
ಸನ್ಯಾಯ ವಿವೃತಿ ಮತಭೇದಗಳಲಿ ॥
ಪನ್ನಗಶಯನನ ಭಕ್ತಿಯ ಜನರಿಗೆ ।
ಪ್ರಸನ್ನವನೆ ಮಾಡಿ ಪುರುಷಾರ್ಥಗಳನಿತ್ಯೋ ॥ ೩ ॥
ಭುದರು ನಿಮ್ಮಯ ನ್ಯಾಯಾಸುಧಾಶ್ರವಣ ಸವಿದು ।
ಮುದವಿ ಮೋಹಂಗಳ ಜರಿದು ನಿನ್ನ ॥
ಪದ್ಧತಿಯನು ತಿಳಿದು ಮುದ್ದುಕೃಷ್ಣನ ಪದವ ।
ಬದ್ದದಿಂದೆದಿಸುವೆ ಪ್ರಸಿದ್ಧನಾದ ಗುರುವೆ ॥ ೪ ॥
ಬರಿಮಾತುಗಳಿಂದ ಬಂದ ವಿದ್ಯಾರಣ್ಯನ ।
ಮರುಳ ಮಾಡಿದ ಗ್ರಂಥ ಕರುಣದಿಂದ ॥
ನರರನರಿಗಳ ಮಾಡಿದಾಶ್ಚರ್ಯ ಕಾರಣ ।
ಪುರುಷ ಹಯವದನನ ಪಾದಸರಸಿಜ ಭೃಮರ ॥ ೫ ॥

# “ಕಾಗಿಣಿನಿಲಯ ಜಯತೀರ್ಥರು”

ರಾಗ – ಅರಬಿ ; ಆದಿತಾಳ

ಜಯಜಯ ಜಯಜಯ ಜಯರಾಯಾ ।
ದಯದಿ ಪಾಲಿಸೋ ಮಹರಾಯಾ ನೀ
ದಯದಿಂ ಪಾಲಿಸೋ ಮಹರಾಯಾ ॥ ಪ ॥

ಪ್ರತಿಜನ್ಮದಿ ತ್ವಶ್ಚರಣದಲಿ ।ಸದ್ಗತಿಯನಿತ್ತು ಕಾಯೋ ಕರುಣದಲಿ ।
ಸನ್ಮತಿವಂತರಲಿಡೋ ನಿರುತದಲಿ॥ಅತಿಬಲ ಹೃದ್ಗರ ತಡೆವಳಿದು ।
ಉನ್ನತಿಯನ ಕೊಡು ಸನ್ನುತ ಮಹಮಹಿಮಾ ॥ ೧ ॥
ಅಚ್ಯುತ ಪದಾಂಭುಜ ಭೃಂಗಾ।ನಿನ್ನರ್ಚನೆಯ ಕೊಡೋಕೋಮಲಾಂಗಾ ।
ತ್ವಶ್ಚರಿತೆಯ ತೋರೋ ಗುಣಪಾಂಗಾ ॥
ಪ್ರಚ್ಛತದೂಷಣೆ ಸಚ್ಛಿದ್ಭೂಷಣೆ ।
ಮೆಚ್ಚಿಪೆ ನಾ ನಿನ್ನ ಮುನಿತುಂಗಾ ॥ ೨ ॥
ವೃಂದಾರಕ ವೃಂದಾರಾಧ್ಯ । ಅಂದಗಂಧ ತುಜನಾಧ್ಯ ।
ನಂದತೀರ್ಥರ ಮತಬೋಧ್ಯ ॥
ಸುಂದರ ತಾಂಡವ ನಿಂದಿಹ ಕೃಷ್ಣನ। ವಂದಿಪ ಸದ್ಗುರು ನಿರವದ್ಯ ॥೩॥

---------------------------------

ರಾಗ – ಕಲ್ಯಾಣಿ

ಜಯರಾಯರ ನೋಡಿರೋ ಸಜ್ಜನರೆಲ್ಲ ।
ಜಯರಾಯರ ನೋಡಿರೋ ॥ ಪ ॥
ಜಯರಾಯರ ನೋಡಿ ಜಪಿಸಿ ಮನದಿ ಪಾಡಿ ।
ಜಯವಾಗುವುದು ನಿಮಗೆ ಭಯನಾಶ ಸತತ ॥ ಅ.ಪ ॥
ದುರುಳಮತವೆಂಬೊ ಕರಿಗೆ ಅಂಕುಶವಿತ್ತು ।

# “ಕಾಗಿಣಿನಿಲಯ ಜಯತೀರ್ಥರು”

ಸರಸಾದಗ್ರಂಥ ಆನಂದಮುನಿ ॥
ವಿರಚಿಸಿ ಇರಲಾಗಿ ಪರಮ ಭಕ್ತಿಯಿಂದ ।
ವಿಸ್ತಾರಮಾಡಿದ ಕರದಕನ್ನಡಿಯಂತೆ ॥೧ ॥
ವಾದಿಗಳನೆಲ್ಲ ಜಯಸಿ ಡಂಗುರ ಹೊಯ್ಸಿ ।
ಭೇದಾರ್ಥಜ್ಞಾನ ಸತ್ಯವೆನಿಸಿ ॥
ಈ ಧರೆಯೊಳಗೆ ಹರಿಯೇ ಪರದೇವವೆಂದು ।
ಸಾಧಿಸಿ ಉದ್ದಂಡನಾದ ಯತಿಕುಲತಿಲಕ ॥ ೨ ॥
ಅಕ್ಷೋಭ್ಯತೀರ್ಥರ ಕರದಿಂದ ಜನಿಸಿ ।
ಮೋಕ್ಷಕ್ಕೆ ಜಯಪತ್ರಿಕೆಯ ಕೊಡಿಸಿ ॥
ಪಕ್ಷೀವಾಹನ **ಸಿರಿವಿಜಯವಿಠ್ಠಲನ್ನ** ।
ಈಕ್ಷಿಸುವುದಕೆ ಉಪದೇಶ ಕೊಡುವ ಋಷಿ ॥ ೩ ॥

---

ದಯದಿಪಾಲಿಸೋ ಜಯತೀರಥರಾಯ ಅಕ್ಷೋಭ್ಯರ ತನಯ ।
ದಯದಿಪಾಲಿಸೋ ಜಯತೀರಥರಾಯ ॥ ಪ ॥
ಅತ್ಯಂತಹರುಷದಿ ಎತ್ತಾಗಿರುತಿರಲು ಆನಂದತೀರ್ಥರು ।
ನಿತ್ಯ ಪಠಿಸುವ ಪುಸ್ತಕ ಹೊರುತಿರಲು । ಗುರುರಾಯರು ಪೇಳಿದ ।
ತತ್ವಗ್ರಂಥವನೆ ಕಿವಿಯಲಿ ಕೇಳುತಲಿ, ತಲೆಯತೂಗುತಲೀ ।
ಮತ್ತೆಪುಟ್ಟಿದೆಯೊ ಮಂಗಳವೇಡೆಯಲಿ, ಅತಿಮತಿವಂತರಲೀ ॥ ೧ ॥
ದೇಶಪಾಂಡೆಯರ ಕೂಸಾಗಿ ಜನಿಸಿ, ಘನರಾವುತನೆನಿಸಿ ।
ದೇಶ ದೇಶದೊಳು ಸೈನ್ಯವನೆ ಚರಿಸಿ, ಹಣವನ್ನೆಗಳಿಸಿ ॥
ವಾಸವಿಯೆಂಬೊ ಗುರುತನೆತಪ್ಪಿಸಿ, ನದಿಗೆ ನೀರಡಿಸಿ ।
ಶ್ರೀಶನಾಜ್ಞೆಯಿಂ ಇವರನೆ ಕರೆತರಿಸಿ, ಶಿಖಿಸೂತ್ರ ತೆಗೆಸಿ ॥ ೨ ॥

# “ಕಾಗಿಣಿನಿಲಯ ಜಯತೀರ್ಥರು”

ಹಿಂಡುಹಿಂಡುಜನ ಅಂಡಲೆಯುತ ಬರಲು, ಅಕ್ಷೋಭ್ಯತೀರ್ಥರ
ಕಂಡು ಭೇಟಿಯ ಮಾಡುತಲಿನಿಂದು, ಧೋಂಡುರಘುನಾಥನು ।
ಹೆಂಡತಿ ಗಂಡನ ಕೂಡಿಸಬೇಕೆಂದು , ಸುಮ್ಮನೆಕರೆತಂದು ।
ಪ್ರಚಂಡಸರ್ಪವ ರೂಪವನೇ ತಾಳ್ದು, ಭಯವ ಪಟ್ಟರಂದು ॥ ೩ ॥
ಮಧ್ವಶಾಸ್ತ್ರಗಳನುದ್ಧರೆಸುತಲದಕೆ, ಟೀಕೆಯನೇ ಮಾಡಿ।
ವಿದ್ವಜ್ಜನರಿಗೆ ತಿದ್ದಿಯೆಪೇಳುತಲಿ, ನಾನಾಬಗೆಯಲ್ಲಿ ।
ಪದ್ಧತಿ ತಿಳಿಸಿದ ಗುರುರಾಯರು ನೀವು, ಯತಿವರಸುರಧೇನು ।
ಅದ್ವೈತರಗುರು ವಿದ್ಯಾರಣ್ಯರ ಗೆದ್ದ, ಸಿಂಹ ನೀನು ॥ ೪ ॥
ಆಶಾಢಬಹುಳ ಪಂಚಮಿಯು ಬರಲು, ಕಳೆಬರವನೆ ಬಿಡುತ ।
ವ್ಯಾಸವಿಠ್ಠಲನ ಪಾದದಲೇನಿರುತ, ಮಳಖೇಡದೊಳು ಸತತ ।
ವಾಸಿಪ ಪಾವಿನತೆರದೊಳ ಪ್ರಖ್ಯಾತ, ನಿಜಗುಣಗಣನೀತ ।
ಬೇಸರದಲೆ ಕೊಂಡಾಡಿದರೆ ನಿತ್ಯ, ಇಷ್ಟಾರ್ಥವ ನೀವ ॥ ೫ ॥

------------------------------------

ದಯದಿ ಸಲಹೋ ಜಯರಾಯ । ಪ ।
ಕಾಗಿಣಿ ನಿಲಯ ಕವಿಜನಗೇಯ ।
ಯೋಗಿವರಿಯ ಕೃಪಾಸಾಗರ ಸತತ । ೧ ।
ಮರುತ ಸುಶಾಸ್ತ್ರಕೆ ವಿರಚಿಸಿ ಟೀಕೆಯ
ಮುರಿದು ಕುಭಾಷ್ಯವ ಮೆರೆದ ಮಹಾತ್ಮ । ೨ ।
ಭೀಮ ಭವಾಟಲಿ ಧೂಮಧ್ವಜ ಸಂ-
ತ್ರಾಮಜ ಸಖ ಸಿರಿ **ಶಾಮಸುಂದರ** ಪ್ರಿಯ । ೩ ।

# ಜಯತೀರ್ಥರ ಗ್ರಂಥಗಳು –

೧. ತತ್ವಪ್ರಕಾಶಿಕಾ ಟೀಕಾ – ಬ್ರಹ್ಮಸೂತ್ರಭಾಷ್ಯಟೀಕೆ
೨. ಶ್ರೀಮನ್ನ್ಯಾಯಸುಧಾ– ಅನುವ್ಯಾಖ್ಯಾನ ಟೀಕಾ
೩. ನ್ಯಾಯವಿವರಣ ಟೀಕಾ
೪. ಪ್ರಮೇಯ ದೀಪಿಕಾ – ಗೀತಾ ಭಾಷ್ಯ ಟೀಕಾ
೫. ನ್ಯಾಯದೀಪಿಕಾ – ಗೀತಾತಾತ್ಪರ್ಯ ಟೀಕಾ
೬. ತತ್ತ್ವಸಂಖ್ಯಾನ ಟೀಕಾ
೭. ತತ್ತ್ವವಿವೇಕ ಟೀಕಾ
೮. ತತ್ತ್ವೋದ್ಯೋತ ಟೀಕಾ
೯. ವಿಷ್ಣುತತ್ತ್ವನಿರ್ಣಯ ಟೀಕಾ
೧೦. ಮಾಯಾವಾದ ಖಂಡನ ಟೀಕಾ
೧೧. ಪ್ರಪಂಚ ಮಿಥ್ಯಾತ್ವಾನುಮಾನಖಂಡನ ಟೀಕಾ
೧೨. ಉಪಾಧಿ ಖಂಡನ ಟೀಕಾ
೧೩. ಕರ್ಮನಿರ್ಣಯ ಟೀಕಾ
೧೪. ಪ್ರಮಾಣಲಕ್ಷಣ
೧೫. ಕಥಾಲಕ್ಷಣ ಟೀಕಾ
೧೬. ಈಶಾವಾಸ್ಯೋಪನಿಷದ್ಭಾಷ್ಯ ಟೀಕಾ
೧೭. ಷಟ್ಪ್ರಶ್ನೋಪನಿಷದ್ಭಾಷ್ಯ ಟೀಕಾ
೧೮. ಋಗ್ಭಾಷ್ಯ ಟೀಕಾ
೧೯. ವಾದಾವಲಿ (ಜಯತೀರ್ಥರ ಸ್ವತಂತ್ರ ಗ್ರಂಥ)
೨೦. ಪ್ರಮಾಣ ಪದ್ದತಿ (ಜಯತೀರ್ಥರ ಸ್ವತಂತ್ರ ಗ್ರಂಥ)
೨೧. ಪದ್ಯಮಾಲಾ (ಜಯತೀರ್ಥರ ಸ್ವತಂತ್ರ ಗ್ರಂಥ)

## ಸಂಗ್ರಹ – ನರಹರಿಸುಮಧ್ವ (9916904341)